5C.R.P.67

Form No.4 (Civil)
Deposition Sheets
(R.P.No.57)



1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ ನಂ. 97/2021

ದಿನಾಂಕ ಃ 29.07.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ:7 ಪಿ. ಡಬ್ಲ್ಯೂ:14

| | |
|---|---|
| ಸಾಕ್ಷಿದಾರರ ಹೆಸರು | ಪ್ರಶಾಂತ್ ಹೆಚ್ |
| ತಂದೆಯ ಹೆಸರು | ಲೇಟ್ ಹನುಮಂತಪ್ಪ |
| ವಯಸ್ಸು | 40 ವರ್ಷ |
| ಉದ್ಯೋಗ | ದ್ವಿತೀಯ ದರ್ಜೆ ಸಹಾಯಕ, ಪೌರಾಡಳಿತ ಇಲಾಖೆ. ಹೊಳಲ್ಕೆರೆ, ಚಿತ್ರದುರ್ಗ |
| ವಾಸ | ಚಿತ್ರದುರ್ಗ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1) ನಾನು 2017 ರಿಂದ 24.11.2021 ರವರಗೆ ಮಂಡ್ಯ ನಗರಸಭೆಯಲ್ಲಿ ದ್ವಿತೀಯ ದರ್ಜೆ ಸಹಾಯಕನಾಗಿ ಕೆಲಸ ಮಾಡುತ್ತಿದ್ದೆನು. ಚಾಸಾ.6 ಮಂಜುನಾಥ ಗೊತ್ತು. ಅವರು ನನ್ನ ಸಹೋದ್ಯೋಗಿಯಾಗಿದ್ದರು.

2) ದಿಃ 28.04.2021 ರಂದು ನಮ್ಮ ಮೇಲಾಧಿಕಾರಿ , ನನಗೆ ಮತ್ತು ನನ್ನ ಸಹೋದ್ಯೋಗಿಯಾದ ಚಾಸಾ.6 ಮಂಜುನಾಥ, ರವರಿಗೆ ಮೆಮೋವನ್ನು ನೀಡಿ, ಕೂಲೆ ಪ್ರಕರಣದಲ್ಲಿ ಮಹಜರ್ ಗೆ ಮಂಡ್ಯದ ಪಶ್ಚಿಮ ಪೊಲೀಸ್ ಠಾಣೆಗೆ ಹೋಗಲು ಸೂಚಿಸಿದರು. ಅದರಂತೆ ನಾನು ಮತ್ತು ನನ್ನ ಸಹೋದ್ಯೋಗಿಯಾದ ಚಾಸಾ.6 ಮಂಜುನಾಥ, ರವವರು ಅದೇ ದಿನ ರಾತ್ರಿ, ಠಾಣೆಯಲ್ಲಿ ಇರುವ ಸರ್ಕಲ್ ಇನ್ಸ್‌ಪೆಕ್ಟರ್ ಕಚೇರಿಗೆ 8.15 ನಿಮಿಷಕ್ಕೆ ಹೋಗಿದ್ದೆವು. ಪೊಲೀಸ್ ಠಾಣೆಯಲ್ಲಿದ್ದ ಸಿಪಿಐ ಕಚೇರಿಯಲ್ಲಿ ಆರೋಪಿ ಮುತ್ತುರಾಜು, ಸಿಪಿಐ, ನಾನು ಮತ್ತು ಚಾಸಾ.6 ರವರು ಇದ್ದೆವು. ಸಿಪಿಐ ರವರು, ನಮ್ಮ ಸಮ್ಮುಖದಲ್ಲಿ ಆರೋಪಿ ಮುತ್ತುರಾಜುರವರಿಂದ, ಆರೋಪಿಯ ಬಟ್ಟೆ ಮತ್ತು ಚಪ್ಪಲಿಯನ್ನು ಮಹಜರ್ ಮಾಡಿ, ಅಮಾನತ್ತು ಪಡಿಸಿಕೊಂಡರು. ಅಲ್ಲದೇ ಆರೊಪಿಯ ಚಡ್ಡಿ ಜೇಬ್ ನಲ್ಲಿದ್ದ 10 ರೂಪಾಯಿಯ 3 ನೋಟುಗಳನ್ನು ಸಿಪಿಐ ರವರು ಅಮಾನತ್ತು ಪಡಿಸಿಕೊಂಡರು. ಆರೋಪಿಗೆ ಸೇರಿದ, ಪ್ಯಾಂಟ್ , ಶರಟು, ಚಪ್ಪಲಿಯನ್ನು ಜಪ್ತಿಪಡಿಸಿಕೊಂಡರು. ಮಹಜರನ್ನು, ರಾತ್ರಿ 8.45 ಗಂಟೆಯಿಂದ 9.30 ಗಂಟೆವರೆಗೆ ಬರೆದರು. ಮಹಜರ್ ಗೆ ನಾನು ಮತ್ತು ನನ್ನ ಸಹೋದ್ಯೋಗಿಯಾದ ಚಾಸಾ.6 ಮಂಜುನಾಥ ರವರು ಸಹಿ ಮಾಡಿದೆವು. ಈಗ ಸದರಿ

ಮಹಜರ್ ಆದ ನಿಪಿ.17 ನ್ನು ನೋಡುತ್ತಿದ್ದು, ಇದರಲ್ಲಿ ಇರುವ ನನ್ನ ರುಜುವನ್ನು ನಿಪಿ.17(ಬಿ) ಎಂದು ಗುರುತಿಸಲಾಯಿತು. ನಿಪಿ.18 ಪಂಚರ ನೋಟಿಸನ್ನು ನೋಡುತ್ತಿದ್ದು, ಇದರಲ್ಲಿ ಇರುವ ನನ್ನ ರುಜುವನ್ನು ನಿಪಿ.18(ಬಿ) ಎಂದು ಗುರುತಿಸಲಾಯಿತು. ಪೊಲೀಸರು ಮಹಜರ್ ಸಮಯದಲ್ಲಿ ವಶಪಡಿಸಿಕೊಂಡಿದ್ದ, ಮೇಲೆ ಹೇಳಿದ ಆರೋಪಿಯ ಬಟ್ಟೆ, ಪ್ಯಾಂಟ್ ಮತ್ತು ಚಪ್ಪಲಿ ಮತ್ತು 10 ರೂಪಾಯಿಯ 3 ನೋಟುಗಳನ್ನು ನೋಡಿದರೆ ಗುರುತಿಸುತ್ತೇನೆ.

3) ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುಮಾ.11 – ಚಪ್ಪಲಿಯನ್ನು ನೋಡಿ ಗುರುತಿಸಿದ್ದು, ಇದರ ಮೇಲೆ ಅಂಟಿಸಿರುವ ಪಂಚರ ಚೀಟಿಯಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಮುಮಾ.11 (ಬಿ)ಎಂದು ಗುರುತಿಸಲಾಯಿತು.ಮುಮಾ.12– ಶರಟನ್ನು ಗುರುತಿಸಿದ್ದು, ಇದರ ಮೇಲೆ ಅಂಟಿಸಿರುವ ಪಂಚರ ಚೀಟಿಯಲ್ಲಿ ಇರುವ ಸಹಿಯನ್ನು ಸಹ ನೋಡಿ ಗುರುತಿಸಿದ್ದು, ಅದನ್ನು ಮು ಮಾ 12 (ಬಿ)ಎಂದು ಗುರುತಿಸಲಾಯಿತು. ಮುಮಾ.13–ಪ್ಯಾಂಟ್‌ನ್ನು ಗುರುತಿಸಿದ್ದು, ಇದರ ಮೇಲೆ ಅಂಟಿಸಿರುವ ಪಂಚರ ಚೀಟಿಯಲ್ಲಿ ಇರುವ ಸಹಿಯನ್ನು ಸಹ ನೋಡಿ ಗುರುತಿಸಿದ್ದು, ಅದನ್ನು ಮು ಮಾ 13 (ಬಿ)ಎಂದು ಗುರುತಿಸಲಾಯಿತು. ಮುಮಾ.14 –10 ರೂಪಾಯಿಯ 3 ನೋಟುಗಳನ್ನು ಗುರುತಿಸಿದ್ದು, ಇದರ ಮೇಲೆ ಅಂಟಿಸಿರುವ ಪಂಚರ ಚೀಟಿಯಲ್ಲಿ ಇರುವ ಸಹಿಯನ್ನು ಸಹ ನೋಡಿ ಗುರುತಿಸಿದ್ದು, ಅದನ್ನು ಮುಮಾ 14 (ಬಿ)ಎಂದು ಗುರುತಿಸಲಾಯಿತು.

4) ಸದರಿ ಕೊಲೆಯು, ಮಂಡ್ಯದ ಬಳಿ ಇರುವ ಈದ್ಗಾ ಮಸೀದಿಯ ಹತ್ತಿರ ಇರುವ ಮಳಿಗೆಯ ಮುಂಭಾಗದಲ್ಲಿ ನಡೆದಿತ್ತು.ಕೊಲೆಯಾಗಿದ್ದ ವ್ಯಕ್ತಿಯ ಹೆಸರು ಮಾದಪ್ಪ ಎಂದು ಗೊತ್ತಾಯಿತು. ಕೊಲೆಯಾಗಿದ್ದ ವ್ಯಕ್ತಿಯು, ಪೇಪರ್, ಬಾಟಲ್, ಚಿಂದಿಯನ್ನು ಹಾಯುತ್ತಿದ್ದುದಾಗಿ ಗೊತ್ತಾಯಿತು. ಆರೋಪಿ ಮುತ್ತುರಾಜುವನ್ನು, ಮಂಡ್ಯದ ಬಳಿ ಇರುವ ಈದ್ಗಾ ಮಸೀದಿಯ ಸಮೀಪದಲ್ಲಿ ಇರುವ ಗೂಬೆಹಳ್ಳ ದಿಂದ ಕರೆದುಕೊಂಡು ಬಂದಿದ್ದಾಗಿ ಪೊಲೀಸರು ನಮಗೆ ತಿಳಿಸಿದ್ದರು.

5) ಈಗ ಸಾಕ್ಷಿಗೆ ತೋರಿಸಿದ ಒಂದು ಮತ್ತು ಎರಡನೇ ಫೋಟೋಗಳನ್ನು, ಸಾಕ್ಷಿಯು ನೋಡಿ, ಸದರಿ 2 ಫೋಟೋಗಳಲ್ಲಿ ಆತನು, ಸರ್ಕಲ್ ಇನ್ಸ್‌ಪೆಕ್ಟರ್, ಆತನ ಸಹೋದ್ಯೋಗಿಯಾದ ಚಾಸಾ.6 ಮಂಜುನಾಥ ಮತ್ತು ಆರೋಪಿ ಮುತ್ತುರಾಜು ಇರುವುದಾಗಿ ತಿಳಿಸುತ್ತಾರೆ. ಸದರಿ ಎರಡು ಫೋಟೋಗಳನ್ನು ನಿಪಿ.23 ಮತ್ತು 24 ಎಂದು ಗುರುತಿಸಲಾಯಿತು. ನಿಪಿ. 24 ಫೋಟೋದಲ್ಲಿ, ಸರ್ಕಲ್ ಇನ್ಸ್‌ಪೆಕ್ಟರ್ ರವರು, ಆರೋಪಿಯ ಜೇಬನ್ನು ಚೆಕ್ ಮಾಡಿಸುತ್ತಿದ್ದಾರೆ.

6) ಈಗ ಸಾಕ್ಷಿಗೆ ತೋರಿಸಿದ ಮೂರು ಮತ್ತು ನಾಲ್ಕನೇ ಫೋಟೋಗಳನ್ನು, ಸಾಕ್ಷಿಯು ನೋಡಿ, ಸದರಿ 2 ಫೋಟೋಗಳಲ್ಲಿ ಆತನು, ಸರ್ಕಲ್ ಇನ್ಸ್‌ಪೆಕ್ಟರ್, ಆತನ ಸಹೋದ್ಯೋಗಿಯಾದ ಚಾಸಾ.6 ಮಂಜುನಾಥ ಮತ್ತು ಆರೋಪಿ ಮುತ್ತುರಾಜು ಇರುವುದಾಗಿ ತಿಳಿಸುತ್ತಾರೆ. ಸದರಿ ಎರಡು ಫೋಟೋಗಳನ್ನು ನಿಪಿ.25 ಮತ್ತು 26 ಎಂದು ಗುರುತಿಸಲಾಯಿತು. ನಿಪಿ.25 ಫೋಟೋದಲ್ಲಿ, ಸರ್ಕಲ್ ಇನ್ಸ್‌ಪೆಕ್ಟರ್ , ಆರೋಪಿಯಿಂದ 10 ರೂಪಾಯಿಯ 3 ನೋಟುಗಳನ್ನು ಹಣವನ್ನು ವಶಪಡಿಸಿಕೊಳ್ಳುತ್ತಿದ್ದಾರೆ. ಹಾಗೂ ನಿಪಿ.26 ಫೋಟೋದಲ್ಲಿ ವಶಪಡಿಸಿಕೊಂಡಿದ್ದ ಹಣವನ್ನು ಕವರ್ ಒಳಗೆ ಹಾಕಿ ಸೀಜ್ ಮಾಡುತ್ತಿದ್ದಾರೆ.

7) ಈಗ ಸಾಕ್ಷಿಗೆ ತೋರಿಸಿದ 5 ಮತ್ತು 6 ನೇ ಫೋಟೋಗಳನ್ನು, ಸಾಕ್ಷಿಯು ನೋಡಿ, ಸದರಿ 2 ಫೋಟೋಗಳಲ್ಲಿ ಆತನು, ಸರ್ಕಲ್ ಇನ್ಸ್‌ಪೆಕ್ಟರ್, ಆತನ ಸಹೋದ್ಯೋಗಿಯಾದ ಚಾಸಾ.6 ಮಂಜುನಾಥ ಮತ್ತು ಆರೋಪಿ ಮುತ್ತುರಾಜು ಇರುವುದಾಗಿ ತಿಳಿಸುತ್ತಾರೆ.ಸದರಿ ಎರಡು ಫೋಟೋಗಳನ್ನು ನಿಪಿ.27 ಮತ್ತು 28 ಎಂದು ಗುರುತಿಸಲಾಯಿತು. ನಿಪಿ.27 ಫೋಟೋದಲ್ಲಿ, ಸರ್ಕಲ್ ಇನ್ಸ್‌ಪೆಕ್ಟರ್ , ಆರೋಪಿಯ ಶರಟನ್ನು ಆರೋಪಿಯಿಂದ ವಶಪಡಿಸಿಕೊಳ್ಳುತ್ತಿದ್ದಾರೆ. ಹಾಗೂ ನಿಪಿ.28 ಫೋಟೋದಲ್ಲಿ ಸರ್ಕಲ್ ಇನ್ಸ್ ಪೆಕ್ಟರ್ , ಆರೋಪಿಯ ಪ್ಯಾಂಟನ್ನು ಆರೋಪಿಯಿಂದ ವಶಪಡಿಸಿಕೊಳ್ಳುತ್ತಿದ್ದಾರೆ.

8) ಈಗ ಸಾಕ್ಷಿಗೆ ತೋರಿಸಿದ 7, 8 ಮತ್ತು 9 ನೇ ಫೋಟೋಗಳನ್ನು, ಸಾಕ್ಷಿಯು ನೋಡಿ, ಸದರಿ 2 ಫೋಟೋಗಳಲ್ಲಿ ಆತನು, ಸರ್ಕಲ್ ಇನ್ಸ್‌ಪೆಕ್ಟರ್, ಆತನ ಸಹೋದ್ಯೋಗಿಯಾದ ಚಾಸಾ.6 ಮಂಜುನಾಥ ಮತ್ತು ಆರೋಪಿ ಮುತ್ತುರಾಜು ಇರುವುದಾಗಿ ತಿಳಿಸುತ್ತಾರೆ.ಸದರಿ ಎರಡು ಫೋಟೋಗಳನ್ನು ನಿಪಿ.29, 30 ಮತ್ತು 31 ಎಂದು ಗುರುತಿಸಲಾಯಿತು. ನಿಪಿ.29 ಫೋಟೋದಲ್ಲಿ, ಆರೋಪಿಯಿಂದ ವಶಕ್ಕೆ ಪಡೆದಿದ್ದ ಆರೋಪಿಯ ಪ್ಯಾಂಟನ್ನು, ಬಟ್ಟೆಯ ಚೀಲದ ಒಳಗೆ ಹಾಕಿ ಜಪ್ತಿ ಪಡಿಸುತ್ತಿದ್ದಾರೆ. ನಿಪಿ.30 ಫೋಟೋದಲ್ಲಿ, ಆರೋಪಿಯಿಂದ ವಶಕ್ಕೆ ಪಡೆದಿದ್ದ ಒಂದು ಚಪ್ಪಲಿಯನ್ನು ಚೀಲದ ಒಳಗೆ ಹಾಕಿ ಜಪ್ತಿ ಪಡಿಸುತ್ತಿದ್ದಾರೆ. ನಿಪಿ.31 ಫೋಟೋದಲ್ಲಿಯೂ ಸಹ ಆರೋಪಿಯಿಂದ ವಶಕ್ಕೆಪಡೆದಿದ್ದ ಇನ್ನೊಂದು ಚಪ್ಪಲಿಯನ್ನು ಚೀಲದ ಒಳಗೆ ಹಾಕಿ ಜಪ್ತಿ ಪಡಿಸುತ್ತಿದ್ದಾರೆ.

9) ಇದರ ಬಗ್ಗೆ ಪೊಲೀಸರು ನನ್ನ ವಿಚಾರಿಸಿ, ಹೇಳಿಕೆಯನ್ನು ತೆಗೆದುಕೊಂಡಿದ್ದರು. ಆರೋಪಿ ಮುತ್ತುರಾಜುವನ್ನು ಈಗ ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ಹೇಳುತ್ತಾರೆ. ಆರೋಪಿಯು ನ್ಯಾಯಾಂಗ ಬಂಧನದಲ್ಲಿ ಇದ್ದು, ಆತನನ್ನು ಈ ದಿವಸ ತೆರೆದ ನ್ಯಾಯಾಲಯಕ್ಕೆ ಹಾಜರು ಪಡಿಸಲು ಆಗಿರುವುದಿಲ್ಲ. ಆದ್ದರಿಂದ ಆತನನ್ನು ನ್ಯಾಯಾಲಯಕ್ಕೆ ವಿ.ಸಿ ಮೂಲಕ ಹಾಜರು ಪಡಿಸಿದಾಗ, ಸಾಕ್ಷಿಯು, ಆರೋಪಿಯನ್ನು ವಿ.ಸಿ.ಯಲ್ಲಿ ನೋಡಿ ಗುರುತಿಸಿದ್ದಾರೆ.

10) ನಿಪಿ. 23 ರಿಂದ 31 ಫೋಟೋದಲ್ಲಿ ಇರುವ ಜಾಗ, ಸರ್ಕಲ್ ಪೊಲೀಸ್ ಇನ್ಸ ಪೆಕ್ಟರ್ ಕೊಠಡಿ.

**ಪಾ ಟೀ ಸವಾಲು ಃ ಆರೋಪಿ ಪರ ್ರೀ ಬಿ ಕೆ ಜಿ ವಕೀಲರಿಂದ, ಎಲ್ ಎ ಡಿ ಸಿ ( ಡಿ ಎಲ್ ಎಸ್ ಎ) ವಕೀಲರಿಂದ ಃ**

1) 2019 ರಿಂದ 2022 ರವರಗೆ ಕೋವಿಡ್ ಅವಧಿ ಇತ್ತು. ಕೋವಿಡ್ ಬರುವುದಕ್ಕಿಂತ ಮುಂಚೆ ಹಾಗೂ ಕೋವಿಡ್ ಅವಧಿಯಲ್ಲಿ ನಮ್ಮ ಕೆಲಸದ ಸಮಯದಲ್ಲಿ ಬದಲಾವಣೆಯಾಗಿತ್ತು ಎಂದರೆ ಸರಿ. ಕೋವಿಡ್ ಬರುವುದಕ್ಕಿಂತ ಮೊದಲು, ನಮ್ಮ ಕಚೇರಿಯ ವೇಳೆ ಬೆಳಿಗ್ಗೆ 9.30 ರಿಂದ ಸಂಜೆ 6.00 ಗಂಟೆವರೆಗೆ ಇತ್ತು. ಕೋವಿಡ್ ಅವಧಿಯಲ್ಲಿ ಬೆಳಿಗ್ಗೆ 8.00 ರಿಂದ ರಾತ್ರಿ 9.00 ಗಂಟೆ ವರೆಗೆ ನಮ್ಮ ಕಚೇರಿಯ ವೇಳೆ ಇತ್ತು. ಸಾಕ್ಷಿಯು, ಮುಂದುವರೆದು ಸ್ವತಃ ನುಡಿಯುತ್ತಾರೆ, ಎಲ್ಲಾ ಸಿಬ್ಬಂದಿಗಳು ಇರುತ್ತಿರಲಿಲ್ಲ ಹಾಗೂ 3 ರಿಂದ 4 ಸ್ಥಳಿಯ ಸಿಬ್ಬಂದಿಗಳು ಮೇಲೆ ಹೇಳಿದ ಸಮಯದಲ್ಲಿ ಕಚೇರಿಯಲ್ಲಿ ಇರುತ್ತಿದ್ದರು. ನಿಮ್ಮ ಪ್ರಕಾರ ಕೋವಿಡ್ ಅವದಿಯಲ್ಲಿ, ಕಚೇರಿಯ ಕೆಲಸದ ಅವಧಿ ಜಾಸ್ತಿ ಇತ್ತು ಎಂದರೆ ಸರಿ. ಕೋವಿಡ್ ಅವಧಿಯಲ್ಲಿ, ಕಚೇರಿಯ ಕೆಲಸದ ಅವಧಿ ಮಾಮೂಲಿ ಕೆಲಸದ ಅವಧಿಗಿಂತ ಕಮ್ಮಿ ಇತ್ತು ಎಂದರೆ ಸರಿಯಲ್ಲ. ಕೋವಿಡ್ ಅವಧಿಯಲ್ಲಿ ನಮ್ಮ ನಗರಸಭೆ ಕಮೀಷನರ್ ರವರು, ಕಚೇರಿಗೆ ಬೆಳಿಗ್ಗೆ 9.00 ಕ್ಕೆ ಬರುತ್ತಿದ್ದರು ಹಾಗೂ ರಾತ್ರಿ 9.00 ಗಂಟೆ ವರೆಗೆ ಕೆಲಸ ಮಾಡುತ್ತಿದ್ದರು. ನನ್ನ ಸಹೊದ್ಯೊಗಿಯಾದ ಚಾಸಾ.6 ರವರು ಬಿಲ್ ಕಲೆಕ್ಟರ್ ಆಗಿದ್ದರು. ಬಿಲ್ ಕಲೆಕ್ಟರ್ ರವರ ಕೆಲಸದ ಕ್ರಮ ಏನೆಂದರೆ, ಅವರುಗಳು, ಕಂದಾಯ ವಸೂಲಿಗಾಗಿ ಕಚೇರಿಯಿಂದ ಹೊರಗಡೆ ಹೋಗುವ ಕೆಲಸ ಎಂದರೆ ಸಾಕ್ಷಿಯು ಕೊವೀಡ್ ಇದ್ದ ಸಮಯದ ಆಗಿದ್ದರಿಂದ, ಬಿಲ್ ಕಲೆಕ್ಟರ್ಗಳು ಕಂದಾಯ ವಸೂಲಿಗೆ ಹೊರಗಡೆ ಹೋಗುತ್ತಿರಲಿಲ್ಲ ಬದಲಿಗೆ ಕಚೇರಿಯಲ್ಲಿಯೇ ಕೆಲಸ ಮಾಡುತ್ತಿದ್ದರು ಎನ್ನುತ್ತಾರೆ. ನಾನು ಮತ್ತು ನನ್ನ ಸಹೋದ್ಯೋಗಿಯಾದ ಚಾಸಾ.6 ರವರು, ಇಬ್ಬರು ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಸ್ಥಳ ಬೇರೆ ಬೇರೆಯಾಗಿತ್ತು ಎಂದರೆ ಸರಿಯಲ್ಲ. ಆ ದಿವಸ ನಗರಸಭೆಯಲ್ಲಿ, ಬೆಳಿಗ್ಗೆ ಸುಮಾರು 8 ರಿಂದ 8.15 ರ ಸಮಯದಲ್ಲಿ ನನಗೆ ಮತ್ತು ನನ್ನ ಸಹೋದ್ಯೋಗಿಯಾದ ಚಾಸಾ.6 ರವರಿಗೆ ಮಹಜರ್ ಗೆ ಹೋಗಬೇಕು ಎಂದು ಹೇಳಿದರು.

2) ಆ ದಿವಸ, ನಮ್ಮ ಕಚೇರಿಯಿಂದ, ಪೊಲೀಸ್ ಠಾಣೆಗೆ 5 ರಿಂದ 10 ನಿಮಿಷದಲ್ಲಿ ಹೋಗಿದ್ದೆವು. ನಾವು ಪೊಲೀಸ್ ಠಾಣೆಯನ್ನು ತಲುಪಿದಾಗ ರಾತ್ರಿ 8.40 ಗಂಟೆ ಆಗಿತ್ತು. ನಾನು ಮತ್ತು ನನ್ನ ಸಹೋದ್ಯೋಗಿಯಾದ ಚಾಸಾ.6 ರವರು ಇಬ್ಬರು ಒಟ್ಟಿಗೆ ನಡೆದುಕೊಂಡು ಠಾಣೆಗೆ ಹೋಗಿದ್ದೆವು. ದಿನಾಂಕ ಃ 28.04.2021 ರ ವಾರ ಯಾವುದು ಅಂತ ಹೇಳಲು ಆಗುವುದಿಲ್ಲ. ಠಾಣೆಗೆ ಹೋದ ಕೂಡಲೇ ಸರ್ಕಲ್ ಇನ್ಸ್‌ಪೆಕ್ಟರ್ ರವರನ್ನು ಅವರ ಕಚೇರಿಯಲ್ಲಿ ಭೇಟಿ ಮಾಡಿದೆವು.ಆಗ ಸರ್ಕಲ್ ಇನ್ಸ್‌ಪೆಕ್ಟರ್ ಕಚೇರಿಯಲ್ಲಿ, ಆರೋಪಿ ಇರಲಿಲ್ಲ. ಆರೋಪಿಯನ್ನು ರಾತ್ರಿ 8.50 ಗಂಟೆಗೆ ಸರ್ಕಲ್ ಇನ್ಸ್ ಪೆಕ್ಟರ್ ಕೊಠಡಿಗೆ ಕರೆಸಿಕೊಂಡರು. ಆರೋಪಿ,

ಕಚೇರಿಗೆ ಬಂದಾಗ, ಸರ್ಕಲ್ ಇನ್ಸ್ ಪೆಕ್ಟರ್, ಆರೋಪಿಯನ್ನು ನಮಗೆ ತೋರಿಸಿ, ಈತನೇ ಆರೋಪಿ ಎಂದು ನಮಗೆ ಗುರುತು ಮಾಡಿಕೊಟ್ಟರು. ಆ ದಿವಸ ಆರೋಪಿಯನ್ನು ಸರ್ಕಲ್ ಇನ್ಸ್ ಪೆಕ್ಟರ್ ಕಚೇರಿಯಲ್ಲಿ ನೋಡಿರುವುದನ್ನು ಹೊರತು ಪಡಿಸಿ, ಆತನನ್ನು ಈವತ್ತಿನವರೆಗೆ ನಾನು ಆರೋಪಿಯನ್ನು ನಾನು ನೋಡಿಲ್ಲ ಎಂದರೆ ಸರಿ. ಆರೋಪಿಯನ್ನು ನಾನು ಈವರೆಗೆ ನೋಡಿಲ್ಲದೇ ಇರುವುದರಿಂದ, ವಿ.ಸಿ. ಯಲ್ಲಿ ತೋರಿಸಿದ ಆರೋಪಿಯನ್ನು ನೋಡಿ, ಈತನೇ ಆರೋಪಿ ಎಂದು ಗುರುತಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3) ಆರೋಪಿಗೆ ಬಟ್ಟೆಯನ್ನು ನಮ್ಮ ಸಮಕ್ಷಮದಲ್ಲಿ ಬದಲಾಯಿಸಿದ್ದರು. ಆರೋಪಿಗೆ, ಬೇರೆ ಬಟ್ಟೆಯನ್ನು ಬದಲಾಯಿಸಲು ಯಾರು ತಂದಿದ್ದರು ಅಂತ ಗೊತ್ತಿಲ್ಲ. ಆರೋಪಿ ಜೇಬಿನಲ್ಲಿ ಇದ್ದ ನೋಟುಗಳು, ಇದೇ ಅಂತ ಗುರುತಿಸುವುದಕ್ಕೆ ನಾನು ಮುಮಾ.14 ನೋಟಿನ ಬಗ್ಗೆ ವಿಶೇಷವಾದ ಗುರುತನ್ನು ಇಟ್ಟುಕೊಂಡಿಲ್ಲ. ನೋಟಿನ ನಂಬರ್ಗಳು ಗೊತ್ತಿಲ್ಲ. ನಿಪಿ.23 ಮತ್ತು 24 ಫೋಟೋದಲ್ಲಿ ಗುರುತಿಸಿರುವ ಆರೋಪಿಯ ಬಟ್ಟೆ ಬಗ್ಗೆ ನಿಖರವಾದ ಗುರುತನ್ನು ನಾನು ಇಟ್ಟುಕೊಂಡಿಲ್ಲ ಎಂದರೆ ಸಾಕ್ಷಿಯು ಅದೇ ಬಟ್ಟೆ ಎಂದು ಹೇಳುತ್ತಾರೆ. ಮುಮಾ.11 ಚಪ್ಪಲಿ, ಆರೋಪಿಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮದಲ್ಲಿ , ಇನ್ಸ್ ಪೆಕ್ಟರ್ ಕಚೇರಿಯಲ್ಲಿ, ಆರೋಪಿಯ ಬಟ್ಟೆ, ಚಪ್ಪಲಿ ಮತ್ತು ನೋಟನ್ನು ಆರೋಪಿಯಿಂದ ವಶಪಡಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ನಿಪಿ.17 ಮಹಜರ್ ನಲ್ಲಿ, ಏನು ಬರವಣಿಗೆ ಆಗಿದೆ ಅಂತ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಹೇಳುತ್ತಾರೆ, ಪೊಲೀಸರು, ಮಹಜರ್ ನಲ್ಲಿ ಆದ ಬರವಣಿಗೆಯನ್ನು ನಮಗೆ ಓದಿ ಹೇಳಿದ್ದರು ಎಂದು.

<u>ಮರು ವಿಚಾರಣೆ:</u> ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.